ಅನ್ನಭಾಗ್ಯ ಯೋಜನೆ ಜಾರಿಗೆ

509(21); ಶ್ರೀ ಜೀವರಾಜ್ ಡಿ.ಎನ್.

ಅ) ರಾಜ್ಯ ಸರ್ಕಾರ ಜಾರಿಗೆ ತಂದಿರುವ ಅನ್ನಭಾಗ್ಯ ಯೋಜನೆ ಪ್ರಾರಂಭಗೊಂಡಿದ್ದು ಯಾವಾಗ: ಯೋಜನೆಯಡಿ ನೀಡುತ್ತಿರುವ ಪಡಿತರ ಚೀಟಿದಾರರ ವಿವರ ನೀಡುವುದು;

ಆ) ಅನ್ನಭಾಗ್ಯ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವ ಪಡಿತರದಾರರ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡಿ;)

ಇ) ಯೋಜನೆ ಜಾರಿಗೆ ಬಂದ ನಂತರ ಇತರೆ ಪಡಿತರ ಚೀಟಿದಾರರಿಗೆ ನೀಡುತ್ತಿದ್ದ ಪಡಿತರ ಕೈ ತಪ್ಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರಿಂದ ಇತರೆ ಪಡಿತರ ಚೀಟಿದಾರರಿಗೆ ತೊಂದರೆಯಾಗುವುದಿಲ್ಲವೇ; ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಈ) ಅನ್ನಭಾಗ್ಯ ಯೋಜನೆಯಡಿ ರಾಗಿ, ಜೋಳ, ಗೋಧಿ ವಿತರಿಸುವ ಯೋಜನೆ ಸರ್ಕಾರಕ್ಕೆ ಇದೆಯೇ; ಎಂದಿನಿಂದ ಪ್ರಾರಂಭಿಸಲಾಗುವುದು (ವಿವರ ನೀಡುವುದು):

ಉ) ಅನ್ನಭಾಗ್ಯ ಯೋಜನೆ ಅನುಷ್ಠಾನದಲ್ಲಿ ವಿಫಲವಾಗಿರುವ ಆರೋಪದಡಿ ಎಷ್ಟು ನ್ಯಾಯಬೆಲೆ ಅಂಗಡಿಗಳಿಗೆ ಬೀಗ ಹಾಕಲಾಗಿದೆ (ಜಿಲ್ಲಾವಾರು ವಿವರ ನೀಡುವುದು)?

ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯ ಸರ್ಕಾರವು ಅನ್ನಭಾಗ್ಯ ಯೋಜನೆಯನ್ನು ಜುಲೈ 2013ರ ಮಾಹೆಯಿಂದ ಪ್ರಾರಂಭಿಸಿರುತ್ತದೆ.

ಈ ಯೋಜನೆಯಡಿ ಒಟ್ಟು 96,87,278 ಪಡಿತರ ಚೀಟಿಗಳ ಫಲಾನುಭವಿಗಳು ಇರುತ್ತಾರೆ. ಈಗಾಗಲೇ ಅನ್ನಭ್ಯಾಗ್ಯ ಯೋಜನೆಯಡಿಯಲ್ಲಿ ಏಕಸದಸ್ಯ ಪಡಿತರ ಚೀಟಿಗೆ 10 ಕೆ.ಜಿ, ದ್ವಿಸದಸ್ಯ ಪಡಿತರ ಚೀಟಿಗೆ 20 ಕೆ.ಜಿ ಮತ್ತು ಮೂರು ಮತ್ತು ಹೆಚ್ಚಿನ ಸದಸ್ಯರುಗಳ ಪಡಿತರ ಚೀಟಿಗೆ 30 ಕೆ.ಜಿ ಆಹಾರ ಧಾನ್ಯವನ್ನು ನೀಡಲಾಗುತ್ತಿದೆ.

ಆ) ಅನ್ನಭಾಗ್ಯ ಯೋಜನೆಯಡಿ ಸೌಲಭ್ಯ ಪಡೆಯುತ್ತಿರುವ ಪಡಿತರ ಚೀಟಿದಾರರ ಸಂಖ್ಯೆ 96,87,278 (ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ)

ಇ) ಸರ್ಕಾರದ ಗಮನಕ್ಕೆ ಬಂದಿರುತ್ತದೆ,

ಆಹಾರ ಭದ್ರತಾ ಕಾಯ್ದೆಯಲ್ಲಿ ಎ.ಪಿ.ಎಲ್./ಬಿ.ಪಿ.ಎಲ್. ಎಂಬ ಪಡಿತರ ಚೀಟಿ ವಿಂಗಡಣೆ ಇರುವುದಿಲ್ಲ. ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ಅರ್ಹ ಕುಟುಂಬಗಳನ್ನು ಆದ್ಯತೆಯ ಅನುಸಾರ ಗುರುತಿಸಿ ಅವರಿಗೆ ಆಹಾರಧಾನ್ಯ ಹಂಚಿಕೆಯನ್ನು ಮಾಡಲಾಗುತ್ತಿದೆ. ಆಹಾರ ಭದ್ರತಾ ಕಾಯ್ದೆಯಡಿಯಲ್ಲಿ ಆದ್ಯತಾ ಕುಟುಂಬಗಳನ್ನು ಗುರುತಿಸುವ ಜವಾಬ್ದಾರಿಯನ್ನು ಆಯಾ ರಾಜ್ಯಗಳಿಗೆ ನೀಡಿದ್ದು, ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ: ಆನಾಸ 80 ಡಿಆರ್‌ಎ 2012, ದಿ: 24–08–2012ರ ಆದೇಶದಲ್ಲಿ ಬಿಪಿಎಲ್ ಕುಟುಂಬದ ವ್ಯಾಪ್ತಿಗೆ ಬರದೆ ಇರುವ ಕುಟುಂಬಗಳನ್ನು ಗುರುತಿಸಿ ಯಾರು ಬಿಪಿಎಲ್ ಪಡಿತರ ಚೀಟಿ ಹೊಂದಲು ಅರ್ಹರಿರುವುದಿಲ್ಲ ಎಂಬ ಮಾನದಂಡವನ್ನು ನಿಗದಿಪಡಿಸಿದೆ.

ಆಹಾರ ಭದ್ರತಾ ಕಾಯ್ದೆಯಡಿಯಲ್ಲಿ ಪ್ರತಿ ಆದ್ಯತಾ ಕುಟುಂಬದ ಸದಸ್ಯರಿಗೆ ಪ್ರತಿ ಮಾಹೆಗೆ 5 ಕೆಜಿ ಆಹಾರಧಾನ್ಯವನ್ನು ನೀಡಲಾಗುವುದು. ಈಗಾಗಲೇ ಕೇಂದ್ರ ಸರ್ಕಾರ ನಿಗದಿಪಡಿಸಿರುವ ಅಂತ್ಯೋದಯ ಕುಟುಂಬಗಳು ಮತ್ತು ಆಹಾರ ಭದ್ರತಾ ಕಾಯ್ದೆಯಡಿಯಲ್ಲಿ ರಾಜ್ಯಕ್ಕೆ ನಿಗದಿಗೊಳಿಸಿರುವ ಗ್ರಾಮಾಂತರ ಶೇ.76 ಜನಸಂಖ್ಯೆ ಮತ್ತು ಪಟ್ಟಣ ಪ್ರದೇಶದ ಶೇ.49 ಜನಸಂಖ್ಯೆಯನ್ನು ಹೊಂದಿರುವ ಕುಟುಂಬಗಳು

ಆದ್ಯತಾ ಕುಟುಂಬಗಳಾಗಿ ಬಿಪಿಎಲ್ ಪಡಿತರ ಚೀಟಿಗಳನ್ನು ಪಡೆಯಲಿವೆ. ಇದರೊಂದಿಗೆ ಮಹಿಳೆಯರು, ಗರ್ಭಿಣಿ ಸ್ತ್ರೀಯರು ಹಾಗೂ ಹಾಲುಣಿಸುವ ಮಹಿಳೆಯರು, 6 ತಿಂಗಳಿನಿಂದ 6 ವರ್ಷದವರೆಗಿನ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳು ಹಾಗೂ ಪ್ರಾಥಮಿಕ ಶಾಲಾ ಮಕ್ಕಳು ಈ ಸೌಲಭ್ಯವನ್ನು ಪಡೆಯುತ್ತಾರೆ.

ಈ) ಅನ್ನಭಾಗ್ಯ ಯೋಜನೆಯಡಿ ಈಗಾಗಲೇ ಗೋಧಿಯನ್ನು ವಿತರಿಸಲಾಗುತ್ತಿದೆ.

ರಾಗಿ ಮತ್ತು ಜೋಳವನ್ನು ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಹಾಗೂ ಟೆಂಡರ್ ಮೂಲಕ ಖರೀದಿಸಿ ಪಡಿತರ ಚೀಟಿದಾರರಿಗೆ ವಿತರಿಸಲು ಕ್ರಮವಹಿಸಲಾಗಿದೆ.

ಉ) ಅನ್ನಭಾಗ್ಯ ಯೋಜನೆ ಅನುಷ್ಠಾನದಲ್ಲಿ ವಿಫಲವಾಗಿರುವ ಅವ್ಯವಹಾರ ನಡೆಸಿರುವ 68 ಅಂಗಡಿಗಳ ವಿರುದ್ದ ಕ್ರಮವಹಿಸಲಾಗಿದೆ ಹಾಗೂ ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದೆ.

District wise Ration Card Statement

SI. NO.	Name of the District	AAY Cards	BPL cards	Total BPL Cards
1	2	3	4	5
1	BAGALKOTE	46709	265932	312641
2	BELGAUM	82322	629460	711782
3	BELLARY	62027	290040	362067
4	BIDAR	39990	235986	275976
5	BIJAPUR	43273	277580	320853
6	DHARWAD	30024	277898	307922
7	GADAG	29052	167611	196663
8	GULBARGA	64185	389059	453244

9	HAVERI	47294	260030	307324
10	KOPPAL	37617	198772	236389
11	RAICHUR	53640	232100	285740
12	UTTARA KANNADA	16227	223125	239352
13	YADGIR	29381	159638	189019
14	BANGALORE URBAN	12641	386857	399498
15	BANGALORE RURAL	14434	178119	192553
16	CHAMARAJA NAGARA	35758	201612	237370
17	CHIKMANGALUR	22714	197842	220556
18	CHITRADURGA	42692	294507	337199
19	DAKSHINA KANNADA	21577	168444	190021
20	DAVANGERE	50244	331286	381530
21	HASSAN	23481	379146	402627
22	KODAGU	10239	84563	94802
23	KOLAR	29983	269360	299343
24	MANDY	34680	378253	412933
25	MYSORE	50655	537375	588030
26	SHIMOGA	38241	269104	307345
27	TUMKUR	49555	484394	533949
28	UDUPI	18741	106222	124963
29	CHIKKABALLAPUR	28721	243899	272620
30	RAMANAGARA	19046	216608	235654
31	BANGALORE IRA	15197	252116	267313
	TOTAL	**1100340**	**8586938**	**9687278**

ಚುಕ್ಕೆ ಗುರುತಿನ ಪ್ರಶ್ನೆ 21 ಕ್ಕೆ ಅನುಬಂಧ

"ಅನ್ನಭಾಗ್ಯ" ಅಕ್ಕಿ ವಿತರಣೆಯಲ್ಲಿ ಅಕ್ರಮ ಎಸಗಿದ ನ್ಯಾಯಬೆಲೆ ಅಂಗಡಿಗಳ ಬಗ್ಗೆ ಕ್ರಮವಹಿಸಿರುವ ವಿವರ

ಕ್ರ.ಸಂ.	ಜಿಲ್ಲೆಯ ಹೆಸರು	ತಾಲ್ಲೂಕಿನ ಹೆಸರು	ಅಕ್ರಮವೆಸಗಿದ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ	ಅಕ್ರಮ ಎಸಗಿದ ನ್ಯಾಯಬೆಲೆ ಅಂಗಡಿಗಳ ವಿರುದ್ಧ ಕೈಗೊಳ್ಳಲಾದ ಕ್ರಮ	ನ್ಯಾಯಬೆಲೆ ಅಂಗಡಿ ಮಾಲೀಕರ ಹೆಸರು, ವಿಳಾಸ ಹಾಗೂ ನ್ಯಾಯಬೆಲೆ ಅಂಗಡಿ ಸಂಖ್ಯೆ
1	2	3	4	5	6
1	ಬಾಗಲಕೋಟೆ	ಬೀಳಗಿ	1	1. ನ್ಯಾಯಬೆಲೆ ಅಂಗಡಿ ಬಗ್ಗೆ ಪೊಲೀಸ್ ಪ್ರಕರಣ ದಾಖಲಿಸಿದೆ	1) ಕಾರ್ಯದರ್ಶಿ ಶ್ರೀ ಬಳ್ಳೇಶ್ವರ ಗ್ರಾಮಮಂಡಳ ಸಾ: ಬಳ್ಳೂರ. ನ್ಯಾಯಬೆಲೆ ಅಂಗಡಿ ಸಂಖ್ಯೆ 17
		ಬಾಗಲಕೋಟೆ	3	3 ನ್ಯಾಯಬೆಲೆ ಅಂಗಡಿಗಳ ಪ್ರಾಧಿಕಾರ ಅಮಾನತ್ತುಗೊಳಿಸಿದೆ.	1) ಶ್ರೀ ಮರುತೇಶ್ವರ ಸ್ವಸಹಾಯ ಸಂಘ. ಕಿರಗೂರು. 2) ಶ್ರೀ ವೀರಭದ್ರೇಶ್ವರ ಗ್ರಾಮಮಂಡಳ ನಯನಗೇಲಿ 3) ಗ್ರಾಮಮಂಡಳ ಅನದಿನ್ನಿ
2	ಬೆಂಗಳೂರು (ಗ್ರಾ)	ದೊಡ್ಡಬಳ್ಳಾಪುರ	1	ವಿಚಾರಣೆ ಕಾಯ್ದಿರಿಸಿ ನ್ಯಾಯಬೆಲೆ ಅಂಗಡಿ ಪ್ರಾಧಿಕಾರ ಅಮಾನತ್ತುಗೊಳಿಸಿದೆ.	ವಿಶ್ವೇಶ್ವರಯ್ಯ ಕಾರ್ಯದರ್ಶಿ. ವಿಎಸ್ ಎಸ್ ಎನ್ ಕೊಡಿಗೆ ಹಳ್ಳಿ ಅಂಗಡಿ ಸಂಖ್ಯೆ 1
		ಬಿಜಾಪುರ	8	ನಿಗದಿಪಡಿಸಿದ ದರ ಹಾಗೂ ಪ್ರಮಾಣದಲ್ಲಿ ಪಡಿತರ ವಿತರಣೆ ಮಾಡದ ಕಾರಣ ವಿಚಾರಣೆ ಕಾಯ್ದಿರಿಸಿ	ಬಿ.ಜಿ.ಎಂ. ಗ್ರಾಮಮಂಡಳ, ಕುಮಟಗಿ ಎಫ್‌ಪಿಡಿ ಸಂಖ್ಯೆ 9 ಗ್ರಾಮಮಂಡಳ ಕುಮಟೆ, ಎಫ್‌ಪಿಡಿ ಸಂಖ್ಯೆ 125

				ಅಮಾನತ್ತುಗೊಳಿಸಲಾಗಿದೆ.	ಯುವಕ ಮಂಡಳ ಹಲಗಣಿ ಎಫ್‌ಪಿಸಿ ಸಂಖ್ಯೆ 141 ಜಿ.ಎಂ. ಕಾತ್ರಾಳ ಎಫ್‌ಪಿಡಿ ಸಂಖ್ಯೆ 130 ಜಿ.ವೈ.ಎಂ. ಕಗ್ಗೋಡ ಎಫ್‌ಪಿಡಿ ಸಂಖ್ಯೆ 10 ಹೆಚ್. ವೈ. ಎಂ ಅಳಗಿನಾಳ ಎಫ್‌ಪಿಡಿ ಸಂಖ್ಯೆ 117 ವಿಎಸ್‌ಎಸ್ ಹೆಬ್ಬಾಳಟ್ಟಿ ಎಫ್‌ಪಿಡಿ ಸಂಖ್ಯೆ 131 ಬಿ.ವೈ.ಎಂ. ಐನಾಪುರ ಎಫ್‌ಪಿಡಿ ಸಂಖ್ಯೆ 1
3	ಬಿಜಾಪುರ	ಬಿ.ಬಾಗೇವಾಡಿ	4	ನಿಗದಿಪಡಿಸಿದ ದರ ಹಾಗೂ ಪ್ರಮಾಣದಲ್ಲಿ ಪಡಿತರ ವಿತರಣೆ ಮಾಡದ ಕಾರಣ ವಿಚಾರಣೆ ಕಾಯ್ದಿರಿಸಿ ಅಮಾನತ್ತುಗೊಳಿಸಲಾಗಿದೆ	ವಿಎಸ್ ಹೂಗಾರ ಸಾ: ಸಿದ್ದನಾಥ ಎಫ್‌ಪಿಡಿ ಸಂಖ್ಯೆ 92 ಬಸವೇಶ್ವರ ಗ್ರಾಮಮಂಡಳ ಬಳೂತಿ ಎಫ್‌ಪಿಡಿ ಸಂಖ್ಯೆ 93 ಗ್ರಾಮಮಂಡಳ ಸುಳಖೋಡ ಎಫ್‌ಪಿಡಿ ಸಂಖ್ಯೆ 89 ವೈಜಿಎಂ ಚಿಮ್ಮಲಗಿ ಭಾಗ 2 ಎಫ್‌ಪಿಡಿ ಸಂಖ್ಯೆ 84
		ಇಂಡಿ	1	ನಿಗದಿಪಡಿಸಿದ ದರ ಹಾಗೂ ಪ್ರಮಾಣದಲ್ಲಿ ಪಡಿತರ	ಗ್ರಾಮಮಂಡಳ ಲಚ್ಚಾಣ ಎಫ್‌ಪಿಡಿ ಸಂಖ್ಯೆ 104

				ವಿತರಣೆ ಮಾಡದ ಕಾರಣ ವಿಚಾರಣೆ ಕಾಯ್ದಿರಿಸಿ ಅಮಾನತ್ತುಗೊಳಿಸಲಾಗಿದೆ	
		ಸಿಂದಗಿ	1	ನಿಗದಿಪಡಿಸಿದ ದರ ಹಾಗೂ ಪ್ರಮಾಣದಲ್ಲಿ ಪಡಿತರ ವಿತರಣೆ ಮಾಡದ ಕಾರಣ ವಿಚಾರಣೆ ಕಾಯ್ದಿರಿಸಿ ಅಮಾನತ್ತುಗೊಳಿಸಲಾಗಿದೆ	ವಿ.ಎಸ್.ಎಸ್.ಬಿ.ಬಿ. ಇಂಗಳಗಿ 75
4	ಚಿಕ್ಕಮಗಳೂರು	ಚಿಕ್ಕಮಗಳೂರು	2	ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ಬೆಲೆಗೆ ಪಡಿತರ ವಿತರಿಸುತ್ತಿದ್ದು ನ್ಯಾಯಬೆಲೆ ಅಂಗಡಿ ಪ್ರಾಧಿಕಾರ ವಿಚಾರಣೆ ಕಾಯ್ದಿರಿಸಿ ಅಮಾನತ್ತು ಪಡಿಸಲಾಗಿದೆ.	ಶ್ರೀ ಮಹಾಲಿಂಗಂ ನ್ಯಾ.ಬೆ.ಅಂ ಮಾಲೀಕರು ಭಕ್ತರಹಳ್ಳಿ ಎಫ್‌ಪಿಡಿ ಸಂಖ್ಯೆ 16 2) ಎಸ್.ಎ ಭೂಜಣ್ಣ ನ್ಯಾ.ಬೆ. ಅಂ ಮಾಲೀಕರು, ಹಲಸಬಾಳು ಎಫ್‌ಪಿಡಿ ಸಂಖ್ಯೆ 77
		ನರಸಿಂಹರಾಜಪುರ	1	ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ಬೆಲೆಗೆ ಪಡಿತರ ವಿತರಿಸುತ್ತಿದ್ದು ನ್ಯಾಯಬೆಲೆ ಅಂಗಡಿ ಪ್ರಾಧಿಕಾರ ವಿಚಾರಣೆ ಕಾಯ್ದಿರಿಸಿ ಅಮಾನತ್ತು ಪಡಿಸಲಾಗಿದೆ.	ಟಿ.ಎ.ಪಿ.ಸಿ.ಎಂ.ಎಸ್. ನ್ಯಾಯಬೆಲೆ ಅಂಗಡಿ ನರಸಿಂಹರಾಜಪುರ ಎಫ್‌ಪಿಡಿ ಸಂಖ್ಯೆ 29
		ತರಿಕೆರೆ	1	ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ಬೆಲೆಗೆ ಪಡಿತರ ವಿತರಿಸುತ್ತಿದ್ದು ನ್ಯಾಯಬೆಲೆ ಅಂಗಡಿ ಪ್ರಾಧಿಕಾರ	ಶ್ರೀ ಗೋವಿಂದಪ್ಪ ನ್ಯಾಬೆ. ಅಂ ಮಾಲೀಕರು ಗಡಿಹಳ್ಳಿ ಎಫ್.ಪಿ.ಡಿ. ಸಂಖ್ಯೆ 54

				ವಿಚಾರಣೆ ಕಾಯ್ದಿರಿಸಿ ಅಮಾನತ್ತು ಪಡಿಸಲಾಗಿದೆ.	
5	ದಾವಣಗೆರೆ	ಜಗಳೂರು	1	ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ಬೆಲೆಗೆ ಪಡಿತರ ವಿತರಿಸುತ್ತಿದ್ದು ನ್ಯಾಯಬೆಲೆ ಅಂಗಡಿ ಪ್ರಾಧಿಕಾರ ವಿಚಾರಣೆ ಕಾಯ್ದಿರಿಸಿ ಅಮಾನತ್ತು ಪಡಿಸಲಾಗಿದೆ.	ಸಂಖ್ಯೆ 3
6	ಧಾರವಾಡ	ಧಾರವಾಡ	2	1) ಅಂಗಡಿಗೆ ಕಾರಣಕೇಳಿ ನೋಟಿಸ್ ನೀಡಿದ್ದು ಇನ್ನೊಂದು ಅಂಗಡಿ ಬಗ್ಗೆ ತಾಲ್ಲೂಕು ಕಛೇರಿಗೆ ಪತ್ರ ಬರೆಯಲಾಗಿದೆ.	
				2) ಅಮಾನತ್ತುಪಡಿಸಲಾಗಿದೆ.	
		ಹುಬ್ಬಳ್ಳಿ	1	ನ್ಯಾಯಬೆಲೆ ಅಂಗಡಿ ಅಮಾನತ್ತುಪಡಿಸಲಾಗಿದೆ	ಪಾಳಾ ಗ್ರಾಮದ ನ್ಯಾಯಬೆಲೆ ಅಂಗಡಿ
7	ಕೊಪ್ಪಳ	ಕೊಪ್ಪಳ	1	ಅಮಾನತ್ತುಪಡಿಸಲಾಗಿದೆ.	ವಿಎಸ್ಎಸ್ಎನ್ ಸಿಂಧೋಗಿ 33
		ಯಲಬುರ್ಗ	1	ಅಮಾನತ್ತುಪಡಿಸಲಾಗಿದೆ.	ಶ್ರೀ ಶಂಕ್ರವ್ವ ಚಿಕ್ಕಮನ್ನಾಪುರ 39
8	ಕೊಡಗು	ಸೋಮಾರಪೇಟೆ	2	1) ಜಿಲ್ಲಾಧಿಕಾರಿಗಳ ನ್ಯಾಯಲಯದಲ್ಲಿ ವಿಚಾರಣೆಗೆ ಬಾಕಿ ಇದೆ. 2) ಅಮಾನತ್ತುಪಡಿಸಲಾಗಿದೆ.	1) ಶ್ರೀ ಗೋಪಾಲ ಕಿರಗಂದೂರು ಗ್ರಾಮ ಅಂಗಡಿ ಸಂಖ್ಯೆ 80. 2) ಡಿ.ಎಲ್. ಜಗದೀಶ್ ಗುಮ್ಮನಕೊಲ್ಲಿ ಗ್ರಾಮ ಅಂಗಡಿ ಸಂಖ್ಯೆ 102

9		ತುರುವಕೇರೆ	1	ಪ್ರಾಧಿಕಾರ ಷರತ್ತು ಉಲ್ಲಂಘನೆಗಾಗಿ ಅಮಾನತ್ತಿನಲ್ಲಿರಿಸಲಾಗಿದೆ.	ಮೀನುಸಾಗಾಣಿ ಹಾಗೂ ಉತ್ಪಾದಕರ ಸಹಕಾರ ಸಂಘ ಮಲ್ಲಾಘಟ್ಟ ಗ್ರಾಮ
10	ತುಮಕೂರು	ಶಿರಾ	8	ಪ್ರಾಧಿಕಾರ ಷರತ್ತು ಉಲ್ಲಂಘನೆಗಾಗಿ ಅಮಾನತ್ತಿನಲ್ಲಿರಿಸಲಾಗಿದೆ.	ಶ್ರೀ ಕೆ.ವಿಶ್ವನಾಥ ರಂಗನಾಥಪುರ ಶ್ರೀ ಬಾಲಾಜಿ ಸಿಂಗ್ ವಡ್ಡನಹಳ್ಳಿ ಗ್ರಾಮ ಪಿ.ಬಿ. ಕೃಷ್ಣೆಗೌಡ ಮಾನಂಗಿ ಗ್ರಾಮ ಮಂಜುನಾಥಪ್ಪ ಶಿರಾ ಪಟ್ಟಣ ಜೋಗಣ್ಣ ಹುಣಸೇ ಕಟ್ಟೆ ಗ್ರಾಮ ಶ್ರೀ ನರಸಿಂಹಯ್ಯ ಲಾಡಪುರ ಕಿತ್ತೂರು ಚನ್ನಮ್ಮ ಮಹಿಳಾ ಮಂಡಳಿ ಗೋಪಾಲ ದೇವರ ಹಳ್ಳಿ ಯುವಕ ರೈತ ಸಂಘ ಬೇವಿನ ಹಳ್ಳಿ
		ಕುಣಿಗಲ್	4	ಪ್ರಾಧಿಕಾರ ಷರತ್ತು ಉಲ್ಲಂಘನೆಗಾಗಿ ಅಮಾನತ್ತಿನಲ್ಲಿರಿಸಲಾಗಿದೆ.	ಶ್ರೀಮತಿ ರತ್ನಮ್ಮ ಹಳೇಪೇಟೆ ಹುಲಿಯೂರು ದುರ್ಗ ಶ್ರೀಮತಿ ಸುಮಿತ್ರಮ್ಮ ಹೊನ್ನೇನ ಹಳ್ಳಿ ಗ್ರಾಮ ಶ್ರೀ ಲಕ್ಷ್ಮಿದೇವಿ ಮಹಿಳಾ ಸಮಾಜ ಸೊಂದಲಗೇರೆ ಗ್ರಾಮ ಶ್ರೀ ರಾಮು ನ್ಯಾಯಬೆಲೆ ಅಂಗಡಿ ನೀಲತ್ತ ಹಳ್ಳಿ ಗ್ರಾಮ
		ಕೊರಟಗೆರೆ	2	ಪ್ರಾಧಿಕಾರ ಷರತ್ತು ಉಲ್ಲಂಘನೆಗಾಗಿ ಅಮಾನತ್ತಿನಲ್ಲಿರಿಸಲಾಗಿದೆ.	ವಿ.ಎಸ್.ಎಸ್.ಎನ್. ಸಿಂಗ್ರಿಹಳ್ಳಿ ಗ್ರಾಮ ಶ್ರೀ ಇನಾಯತ್ ಉಲ್ಲಾಖಾನ್ ಮಾದವಾರ ಗ್ರಾಮ

		ಪಾವಗಡ	1	ಪ್ರಾಧಿಕಾರ ಷರತ್ತು ಉಲ್ಲಂಘನೆಗಾಗಿ ಅಮಾನತ್ತಿನಲ್ಲಿರಿಸಲಾಗಿದೆ.	ಶ್ರೀ ಡಿ.ಹಚ್. ನಾಗರಾಜು ದಳವಾಯಿ ಹಳ್ಳಿ ಗ್ರಾಮ
		ತುಮಕೂರು ಗ್ರಾಮ	2	ಪ್ರಾಧಿಕಾರ ಷರತ್ತು ಉಲ್ಲಂಘನೆಗಾಗಿ ಅಮಾನತ್ತಿನಲ್ಲಿರಿಸಲಾಗಿದೆ.	ಶ್ರೀ ಪಂಚಾಕ್ಷರಯ್ಯ ಹೆಗ್ಗೆರೆ ಗ್ರಾಮ ಶ್ರೀ ಜಿ. ಮೂರ್ತಿ ದೊಡ್ಡ ಸಾರಂಗಿ ಪಾಳ್ಯ ಗ್ರಾಮ
11	ಹಾಸನ		16	6 ನ್ಯಾಯಬೆಲೆ ಅಂಗಡಿಗಳನ್ನು ಅಮಾನತ್ತುಗೊಳಿಸಿದ್ದು 10 ನ್ಯಾಯಬೆಲೆಅಂಗಡಿಗಳಿಗೆ ಕಾರಣಕೇಳಿ ನೋಟೀಸ್ ನೀಡಿದೆ.	
12	ರಾಮನಗರ	ರಾಮನಗರ ತಾ॥	1	ವಿಚಾರಣೆ ಕಾಯ್ದಿರಿಸಿ ಪ್ರಾಧಿಕಾರಿ ಅಮಾನತ್ತುಗೊಳಿಸಲಾಗಿದೆ.	ಶ್ರೀಮತಿ ಶೀಲಮ್ಮ ಕೆಂಷನಕುಪ್ಪೆ ಗ್ರಾಮ ಬಿಡದಿ ಹೋಬಳಿ, ನ್ಯಾಯಬೆಲೆ ಅಂಗಡಿ ಸಂಖ್ಯೆ: 68
13	ಶಿವಮೊಗ್ಗ	ಶಿವಮೊಗ್ಗ ಅ.ಪ.	2	2 ನ್ಯಾಯಬೆಲೆ ಅಂಗಡಿ ಪ್ರಾಧಿಕರಣ ವಿಚಾರಣೆ ಕಾಯ್ದಿರಿಸಿ ಅಮಾನತ್ತುಪಡಿಸಲಾಗಿದೆ.	ಶ್ರೀಮತಿ ಜಯಮ್ಮ ನ್ಯಾ.ಬೆ. ಅಂ. ಶರಾವತಿ ನಗರ ಸದಾಶಿವಪ್ಪ ನ್ಯಾ. ಬೆ ಅಂ. ಕುಂಭಾರಗುಂಡಿ
			68		